# ಅಮ್ಮ-ಮಗನ ಹೊಸ ಅಂಕ

ಅಜಯ್ ರಾವ್ ಮತ್ತು ಆಶಿಕಾ ರಂಗನಾಥ್ ಜೋಡಿಯಾಗಿ ನಟಿಸಿರುವ 'ತಾಯಿಗೆ ತಕ್ಕ ಮಗ' ಸಿನಿಮಾದ ಚಿತ್ರೀಕರಣ ಹೆಚ್ಚೂ ಕಡಿಮೆ ಮುಗಿದಿದೆ. ಹಾಡಿನ ಭಾಗದ ದೃಶ್ಯೀಕರಣವಷ್ಟೇ ಬಾಕಿಯುಳಿದಿದೆ.

ಭಾವುಕ ಕಥನಗಳನ್ನು ನಿರೂಪಿಸುವಲ್ಲಿ ಪಳಗಿರುವ ಶಶಾಂಕ್ ಅಮ್ಮ–ಮಗನ ಕಥೆ ಹೇಳುತ್ತಿದ್ದಾರೆ. ಅಜಯ್‌ಗೆ ಅಮ್ಮನಾಗಿ ಸುಮಲತಾ ಅಭಿನಯಿಸಿದ್ದಾರೆ. ಹಾಗೆ ನೋಡಿದರೆ ಅಜಯ್ ಮತ್ತು ಸುಮಲತಾ ನಡುವಣ ತಾಯಿ–ಮಗನ ನಂಟು ಇದು ಹೊಸತೇನಲ್ಲ. ಇದಕ್ಕೆ ಮುನ್ನ ಪ್ರೇಮ್ ನಿರ್ದೇಶನದ 'ಎಕ್ಸ್ ಕ್ಯೂಸ್ ಮಿ' ಚಿತ್ರದಲ್ಲಿ ಇಬ್ಬರೂ ಕಳ್ಳುಬಳ್ಳಿ ಪಾತ್ರದಲ್ಲಿ ನಟಿಸಿದ್ದರು. ಶಶಾಂಕ್ ಚಿತ್ರದಲ್ಲಿ ಅಮ್ಮನದು ವಕೀಲೆಯ ಪಾತ್ರ. ಊರಿಗೆ ವಕೀಲೆಯಾದರೂ ಮಗನಿಗೆ ಅಮ್ಮ ಎನ್ನುವ ರೀತಿಯ ಪಾತ್ರ ಅವರದು.

'ಕೃಷ್ಣನ್ ಲವ್ ಸ್ಟೋರಿ' ಮತ್ತು 'ಕೃಷ್ಣ ಲೀಲಾ' ನಂತರ ಶಶಾಂಕ್–ಅಜಯ್ ಒಟ್ಟಿಗೆ ಮಾಡುತ್ತಿರುವ ಮೂರನೇ ಸಿನಿಮಾ 'ತಾಯಿಗೆ ತಕ್ಕ ಮಗ'. ನಾಯಕ ಅಜಯ್‌ಗೆ ಇದು ಇಪ್ಪತ್ತೈದನೇ ಸಿನಿಮಾ. ನಟನೆಗೆ ಅವಕಾಶವಿರುವ ಪಾತ್ರದ ಈ ಸಿನಿಮಾ ತಮ್ಮ ವೃತ್ತಿಜೀವನದ ಬೆಳ್ಳಿ ಸಂಭ್ರಮಕ್ಕೆ ಅರ್ಥಪೂರ್ಣತೆ ಒದಗಿಸಲಿದೆ ಎನ್ನುವ ನೆಚ್ಚುಗೆ ಅವರದು.

'ಮುಗುಳುನಗೆ' ನಂತರ ಒಳ್ಳೆಯ ಪಾತ್ರವೊಂದು ದೊರಕಿರುವ ಖುಷಿ ನಾಯಕಿ ಆಶಿಕಾ ಅವರದು. ಈ ಚಿತ್ರದಲ್ಲಿ ಅವರದು ಪೂರ್ಣ ಪ್ರಮಾಣದ ನಾಯಕಿ ಪಾತ್ರ. ಶಶಾಂಕ್ ಲೆಕ್ಕಾಚಾರ ಸರಿಯಾದರೆ ದಸರೆಯ ಆಸುಪಾಸಿನಲ್ಲಿ ಸಿನಿಮಾ ತೆರೆ ಕಾಣಲಿದೆ.





# ಡ್ಯಾನ್ಸ್ ಆಕಾಶ್ ಡ್ಯಾನ್ಸ್!

ಕಾಲೇಜು ದಿನಗಳ ಹುಮ್ಮಸ್ಸು ಹಾಗೂ ಪ್ರೇಮದ ಕನವರಿಕೆಗಳ ಕಥೆಯನ್ನೊಳಗೊಂಡ 'ಬಿಂದಾಸ್ ಗೂಗ್ಲಿ' ಚಿತ್ರ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ (ಸೆ. 7 ತೆರೆಗೆ). ಸಂತೋಷ್‌ಕುಮಾರ್ ಈ ಚಿತ್ರದ ನಿರ್ದೇಶಕರು. 'ಸ್ಟೂಡೆಂಟ್ಸ್' ಎನ್ನುವ ಸಿನಿಮಾ ನಿರ್ದೇಶಿಸಿದ್ದ ಅವರು, ಈ ಬಾರಿಯೂ ವಿದ್ಯಾರ್ಥಿಗಳ ಕಥೆಯನ್ನೇ ನಿರೂಪಿಸಿದ್ದಾರೆ.

ಕಾಲೇಜು ತರುಣ ತರುಣಿಯರ ತುಂಟಾಟ, ತೊಳಲಾಟಗಳು ಸಿನಿಮಾದಲ್ಲಿ ಚೆನ್ನಾಗಿ ಮೂಡಿಬಂದಿವೆ. ಚಿತ್ರದಲ್ಲಿನ ಪ್ರತಿಯೊಂದು ಪಾತ್ರವೂ ಒಂದೊಂದು ಸಂದೇಶವನ್ನು ಪ್ರತಿನಿಧಿಸಲಿದೆ ಎನ್ನುವ ನಿರ್ದೇಶಕರು, ತಮ್ಮ ಚಿತ್ರ ಯುವಪ್ರೇಕ್ಷಕರಿಗೆ ಇಷ್ಟವಾಗಲಿದೆ ಎನ್ನುವ ನಂಬಿಕೆ ಹೊಂದಿದ್ದಾರೆ. ನಲವತ್ತು ದಿನಗಳ ಕಾಲ ಬೆಳಗಾವಿಯಲ್ಲಿ ಚಿತ್ರೀಕರಣ ನಡೆಸಿರುವುದರಿಂದ, ಬೆಳಗಾವಿಯ ಪರಿಸರ ಚಿತ್ರದಲ್ಲಿ ಹೈಲೈಟ್ ಆಗಲಿದೆ.

ಬೆಳಗಾವಿ ಮೂಲದ ಆಕಾಶ್ ಚಿತ್ರದ ನಾಯಕ. ಅವರ ತಂದೆ ವಿಜಯ್ ಅಣ್ವೇಕರ್ ಮಗನಿಗೆ ಹೀರೊ ಪಟ್ಟ ದೊರಕಿಸಿಕೊಡುವ ಉಮೇದಿನಿಂದ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ನೃತ್ಯಶಾಲೆ ಚಿತ್ರದಲ್ಲಿ ಕಥೆ ನಡೆಯುವ ವೇದಿಕೆ. ವಿದ್ಯಾರ್ಥಿ ದೆಸೆಯಿಂದಲೂ ನೃತ್ಯದ ಗೀಳು ಹತ್ತಿಸಿಕೊಂಡಿದ್ದ ಆಕಾಶ್‌ಗೆ ಸಿನಿಮಾದಲ್ಲಿ ಹಾಡಿ ಕುಣಿಯುವುದು ಅಷ್ಟೇನೂ ಕಷ್ಟವೆನ್ನಿಸಿಲ್ಲ. ಧರ್ಮ ಕೀರ್ತಿರಾಜ್ ಡ್ಯಾನ್ಸ್ ಮಾಸ್ಟರ್ ಪಾತ್ರದಲ್ಲಿ ನಟಿಸಿದ್ದಾರಂತೆ. ಉಳಿದಂತೆ ಮಮತಾ, ನಿಮಿಕಾ, ಶಿಲ್ಪಾ, ಶ್ರುತಿ ರಾಮಕೃಷ್ಣ ತಾರಾಗಣದಲ್ಲಿರುವ ಪ್ರಮುಖರು. ಮ್ಯಾಥ್ಯು ರಾಜನ್ ಛಾಯಾಗ್ರಹಣ ಹಾಗೂ ವಿನು ಸಂಗೀತ ಚಿತ್ರಕ್ಕಿದೆ.

■ ರಘು